# ಕರ್ನಾಟಕ ಸರ್ಕಾರ

## ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

**2009-2010 ನೇ ಸಾಲಿನ**

**ಕರ್ನಾಟಕ ಸರ್ಕಾರದ ಪರಿಸರ ಪ್ರಶಸ್ತಿಗಾಗಿ ಅರ್ಜಿ/ನಾಮನಿರ್ದೇಶನ ಆಹ್ವಾನ**

ಪರಿಸರ ಸಂರಕ್ಷಣೆಗಾಗಿ ಗಣನೀಯ ಸೇವೆ ಸಲ್ಲಿಸಿದ ವ್ಯಕ್ತಿ/ಸಂಸ್ಥೆಗಳನ್ನು ಗುರುತಿಸುವುದಕ್ಕಾಗಿ 2009-2010ನೇ **ಸಾಲಿನ** ರಾಜ್ಯ ಪರಿಸರ ಪ್ರಶಸ್ತಿಗಾಗಿ ಅರ್ಜಿ/ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಈ ಪ್ರಶಸ್ತಿ ತಲಾ 1.00 ಲಕ್ಷ ರೂ. ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಈ ಪ್ರಶಸ್ತಿಯನ್ನು ವ್ಯಕ್ತಿ ಮತ್ತು ಸಂಸ್ಥೆಗಳಿಗೆ (ಸರ್ಕಾರಿ ವಲಯ, ಸರ್ಕಾರೇತರ ಸಂಸ್ಥೆ, ಕಂಪನಿ ಟ್ರಸ್ಟುಗಳು ಇತರೆ) (i) ಪರಿಸರ ಸಂರಕ್ಷಣೆ ಮತ್ತು (ii) ಪರಿಸರ ವ್ಯವಸ್ಥಾಪನೆ ಕ್ಷೇತ್ರಗಳಲ್ಲಿನ ಗಣನೀಯ ಸೇವೆಗಾಗಿ ನೀಡಲಾಗುವುದು.

ಈ ಪ್ರಶಸ್ತಿಗಳನ್ನು ರಾಜ್ಯದ ಮೂರು ವಲಯಗಳಲ್ಲಿ ಎಂದರೆ ಮಲೆನಾಡು, ಕರಾವಳಿ ವಲಯ (ಬೆಳಗಾಂ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಕೊಡಗು, ಚಾಮರಾಜ ನಗರ, ಹಾಸನ, ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳು) ದಕ್ಷಿಣ ವಲಯ (ಮಂಡ್ಯ, ರಾಮನಗರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು ಜಿಲ್ಲೆಗಳು) ಮತ್ತು ಉತ್ತರ ವಲಯ (ದಾವಣಗೆರೆ, ಚಿತ್ರದುರ್ಗ, ಹಾವೇರಿ, ಧಾರವಾಡ, ಗದಗ್, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು)ಗಳ ತಲಾ ಒಬ್ಬರು ವ್ಯಕ್ತಿ ಮತ್ತು ಒಂದು ಸಂಸ್ಥೆಗೆ ನೀಡಲಾಗುವುದು.

ಪ್ರಶಸ್ತಿಗೆ ಆಯ್ಕೆ ಮಾಡುವಾಗ ಈ ಕೆಳಗಿನ ಒಂದು ಅಥವಾ ಉಭಯ ಕ್ಷೇತ್ರಗಳಲ್ಲಿ ಸಲ್ಲಿಸಿರುವ ಸೇವೆ/ ಆರಂಭಶೀಲತೆ/ ಯೋಜನೆ/ ಕಾರ್ಯಕ್ರಮಗಳ ಮೂಲಕ ನೀಡಿರುವ ಕೊಡುಗೆಯ ಮೌಲ್ಯ ನಿರ್ಣಯ ಮಾಡಲಾಗುವುದು.

**i)** **ಪರಿಸರ ಸಂರಕ್ಷಣೆ:-** ಇದರಲ್ಲಿ ಜೈವಿಕ ವೈವಿಧ್ಯತೆ, ಜೈವಿಕ ವ್ಯವಸ್ಥೆ, ವಾಯು, ಜಲ, ಮಣ್ಣು, ನೈಸರ್ಗಿಕ ಸಸ್ಯರಾಶಿ, ವನ್ಯ ಜೀವಿ ಇತ್ಯಾದಿಗಳ ಸಂರಕ್ಷಣೆ ಮತ್ತು ಸಹ್ಯ ವ್ಯವಸ್ಥಾಪನೆ, ಇತ್ಯಾದಿ ಒಳಗೊಂಡಿರುತ್ತದೆ.

---2

**ii)ಪರಿಸರ ವ್ಯವಸ್ಥಾಪನೆ:-** ಇದರಲ್ಲಿ ಸದೃಢ ಮತ್ತು ಗುಣಾತ್ಮಕ ಪರಿಸರ ಅಭ್ಯಾಸಗಳು, ಸಂಸ್ಕರಣೆ ಅಥವಾ ಪದಾರ್ಥಗಳ ಬಳಕೆಯಲ್ಲಿ ಪರಿಸರ ಮಾಲಿನ್ಯ ಕಡಿಮೆಗೊಳಿಸುವುದು, ಸಂಪನ್ಮೂಲಗಳ ಸಂರಕ್ಷಣೆ ಮತ್ತು ಸಹ್ಯ ಅಭಿವೃದ್ಧಿಯ ಧ್ಯೇಯ ಹೊಂದಿರುವುದು, ಇತ್ಯಾದಿ ಒಳಗೊಂಡಿರುತ್ತದೆ.

**ಯಾರು ಅರ್ಜಿ ಸಲ್ಲಿಸಬಹುದು:**

೧. ಪರಿಸರ ಸಂರಕ್ಷಣೆ ಮತ್ತು ಪರಿಸರ ವ್ಯವಸ್ಥಾಪನೆ ಯಾವುದಾದರೂ ಒಂದು ಕ್ಷೇತ್ರ ಅಥವಾ ಎರಡರಲ್ಲೂ ಕರ್ನಾಟಕದಲ್ಲಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು (ಕರ್ನಾಟಕದಲ್ಲಿ ವಾಸವಾಗಿರುವವರು) ಮತ್ತು ಸಂಸ್ಥೆಗಳಿಗೆ ಈ ಪ್ರಶಸ್ತಿ ಮುಕ್ತವಾಗಿದೆ.

೨. ಸರ್ಕಾರೇತರ ಸಂಸ್ಥೆಗಳಾಗಿದ್ದಲ್ಲಿ 01.04.2009ಕ್ಕೆ ನೊಂದಾಯಿತವಾಗಿ ಕನಿಷ್ಠ 3 ವರ್ಷಗಳಾಗಿರಬೇಕು.

೩. ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮತ್ತು ಸಂಬಂಧಿಸಿದ ಸಂಸ್ಥೆಗಳ ನೌಕರರು ಈ ಪ್ರಶಸ್ತಿಗೆ ಅರ್ಹರಾಗಿರುವುದಿಲ್ಲ.

೪. ವ್ಯಕ್ತಿಗಳು ಅಧಿಕಾರ ಸಾಮರ್ಥ್ಯದಲ್ಲಿ ನಿರ್ವಹಿಸಲಾದ ಕಾರ್ಯಗಳು/ ಆರಂಭಶೀಲತೆಗಳು/ ಯೋಜನೆಗಳು/ ಕಾರ್ಯಕ್ರಮಗಳನ್ನು ಈ ಪ್ರಶಸ್ತಿಗೆ ಪರಿಗಣಿಸಲಾಗುವುದಿಲ್ಲ.

೫. ಈ ಹಿಂದೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯಿಂದ ಪ್ರಶಸ್ತಿ ಪುರಸ್ಕೃತರಾದ ವ್ಯಕ್ತಿ/ಸಂಸ್ಥೆಗಳನ್ನು ಪರಿಗಣಿಸಲಾಗುವುದಿಲ್ಲ.

**ಪ್ರಶಸ್ತಿಗಾಗಿ ಪರಿಗಣಿಸುವ ಕಾರ್ಯಗಳ ಅವಧಿ:-**

೧. ಈ ಪ್ರಶಸ್ತಿಗಾಗಿ ಪರಿಗಣಿಸಲಾಗುವ ವ್ಯಕ್ತಿ/ಸಂಸ್ಥೆಯ ಆರಂಭಶೀಲತೆ/ ಕಾರ್ಯಕ್ರಮಗಳು/ಯೋಜನೆಗಳು/ಕೊಡುಗೆಗಳು 01.04.2009ಕ್ಕೆ 5 ವರ್ಷಗಳ ಒಳಗಿರಬೇಕು.

೨. ಯಾವುದೇ ವ್ಯಕ್ತಿ/ಸಂಸ್ಥೆಗಳು ಪರಿಸರ ಕ್ಷೇತ್ರದಲ್ಲಿ ನಿರ್ವಹಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ ಪ್ರಶಸ್ತಿಗೆ ತಾನೇ ಅಥವಾ ಪ್ರಶಸ್ತಿ ಸಮಿತಿಯ ಸಮಾಲೋಚನೆಯೊಂದಿಗೆ ನಾಮಕರಣ ಮಾಡುವ ಅಧಿಕಾರವನ್ನು ಸರ್ಕಾರ ಕಾಯ್ದಿರಿಸಿದೆ.

---3

**ಅರ್ಜಿ ಸಲ್ಲಿಸಬೇಕಾದ ರೀತಿ:**

ಈ ಕೆಳಗಿನ ವಿವರಗಳನ್ನು ಒಳಗೊಂಡಿರುವ ಅರ್ಜಿಯನ್ನು ಮುಚ್ಚಿದ ಲಕೋಟೆಯಲ್ಲಿ ಮಾತ್ರವೇ ಸಲ್ಲಿಸಬೇಕು.

೧. ವ್ಯಕ್ತಿ/ಸಂಸ್ಥೆಯ ಹೆಸರು.

೨. ವ್ಯವಹರಿಸಬೇಕಾದ ವಿಳಾಸ

೩. ನಿರ್ವಹಿಸಲಾದ ಕಾರ್ಯ/ಆರಂಭಶೀಲತೆ/ಯೋಜನೆ/ಕಾರ್ಯಕ್ರಮಗಳ ಕುರಿತಾಗಿ ವಿವರಗಳನ್ನು ವರ್ಷವಾರು ಮತ್ತು ಕ್ಷೇತ್ರವಾರು ಪೂರಕ ದಾಖಲೆ ಗಳೊಡನೆ ನೀಡುವುದು.

೪. ವ್ಯಕ್ತಿ/ಸಂಸ್ಥೆಗಳು ಪರಿಸರ ಸಂರಕ್ಷಣೆಗಾಗಿ ನಿರ್ವಹಿಸಲಾಗಿರುವ ಕಾರ್ಯದ ಅವಧಿ (ವರ್ಷಗಳಲ್ಲಿ) ಮತ್ತು ಸಾಧನೆ.

೫. ಪ್ರಶಸ್ತಿಗೆ ಸೂಚಿಸಲಾಗಿರುವ ಕಾರ್ಯ/ಆರಂಭಶೀಲತೆ/ಯೋಜನೆ ಕಾರ್ಯಕ್ರಮ ಗಳ ನಿರ್ವಹಣೆಗಾಗಿ ವಿನಿಯೋಗಿಸಲಾಗಿರುವ ಹಣ ಮತ್ತು ಆರ್ಥಿಕ ಸಹಾಯದ ಮೂಲಗಳು (ಪಡೆದಿದ್ದಲ್ಲಿ)

೬. ಈವರೆಗೆ ಪಡೆದಿರುವ ಪ್ರಶಸ್ತಿಗಳ ವಿವರಗಳು (ಪಡೆದಿದ್ದಲ್ಲಿ)

೭. ಪ್ರತಿಪಾದನೆ ಕುರಿತಾಗಿ ಸಾಕ್ಷ್ಯಾಧಾರಗಳು

ಅರ್ಜಿದಾರರನ್ನು ಪ್ರಶಸ್ತಿ ಸಮಿತಿಯ ಮುಂದೆ ವೈಯಕ್ತಿಕವಾಗಿ ಹಾಜರಾಗಲು ಆಹ್ವಾನಿಸಲಾಗುವುದಿಲ್ಲ. ಆದುದರಿಂದ, ಅರ್ಜಿಯೊಂದಿಗಿರುವ ಮಾಹಿತಿಗಳು ಸಮರ್ಪಕ ರೀತಿಯಲ್ಲಿ ದಾಖಲಾತಿ ಮತ್ತು ಸೂಚಿತವಾಗಿರಬೇಕು. ಮುಖ್ಯವಾದ ಮೌಲೀಕರಣ ಮಾನದಂಡಗಳನ್ನು ಅರ್ಜಿಯಲ್ಲಿ ವಿವರವಾಗಿ ಪ್ರತಿನಿಧಿಸಿರಬೇಕು. ಅಪೂರ್ಣವಾದ ಹಾಗೂ ಕಾರ್ಯನಿರ್ವಹಿಸಿರುವುದರ ಬಗ್ಗೆ ಆಧಾರವಾಗಿರುವ ದಾಖಲೆ/ ಸಾಕ್ಷ್ಯಾಧಾರ/ ರುಜುವಾತು ಗಳು ಇಲ್ಲದೇ ಸಲ್ಲಿಸಲಾದ ಅರ್ಜಿಗಳನ್ನು ಪ್ರಶಸ್ತಿ ಸಮಿತಿಯ ಮುಂದೆ ಮಂಡಿಸ ಲಾಗುವುದಿಲ್ಲ. ಪ್ರಶಸ್ತಿ ಸಮಿತಿಯು ಅಗತ್ಯವಿದ್ದಲ್ಲಿ ಅರ್ಜಿದಾರರು/ನಾಮನಿರ್ದೇಶನ ಮಾಡುವವರು ಪ್ರತಿಪಾದಿಸುವ ಕಾರ್ಯಗಳ ಕುರಿತಾಗಿ ಕ್ಷೇತ್ರ ಸಮೀಕ್ಷೆ ನಡೆಸುವ ಅಧಿಕಾರವನ್ನು ಹೊಂದಿರುತ್ತದೆ.ಆಧಾರರಹಿತ ಪ್ರತಿಪಾದನೆ ಮಾಡುವ ಹಾಗೂ ಪ್ರಭಾವ ಬೀರುವ ಅರ್ಜಿದಾರರನ್ನು ಈ ಪ್ರಶಸ್ತಿಗೆ ಹಾಗೂ ಇನ್ನು ಮುಂದಿನ ಯಾವುದೇ ರಾಜ್ಯ ಪ್ರಶಸ್ತಿಗೆ ಅನರ್ಹಗೊಳಿಸಲಾಗುವುದು.

---4

**ಅರ್ಜಿಗಳನ್ನು ಸಲ್ಲಿಸುವುದು:**

ಸರ್ಕಾರದ ವಿಶೇಷ ಕಾರ್ಯದರ್ಶಿಗಳು, ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ (ಜೀವಿಶಾಸ್ತ್ರ ಮತ್ತು ಪರಿಸರ), ಕೊಠಡಿ ಸಂಖ್ಯೆ **708,** 7ನೇ ಮಹಡಿ, ಬಹುಮಹಡಿಗಳ ಕಟ್ಟಡ, 4ನೇ ಹಂತ, ಬೆಂಗಳೂರು-560001 ಇವರಿಗೆ ಕಳುಹಿಸಬಹುದಾಗಿದೆ.

**ಕೊನೆಯ ದಿನಾಂಕ:**

ಸಂಪೂರ್ಣವಾಗಿ ಭರ್ತಿಮಾಡಿದ ಅರ್ಜಿಗಳನ್ನು ದಿನಾಂಕ:31.03.2010 ರಂದು ಸಾಯಂಕಾಲ 5.00 ಗಂಟೆಯೊಳಗಾಗಿ ಮಾತ್ರ ಸ್ವೀಕರಿಸಲಾಗುವುದು. ಆ ನಂತರ ಸ್ವೀಕರಿಸಲಾಗುವ ಅರ್ಜಿಗಳನ್ನು ಯಾವುದೇ ಸಂದರ್ಭದಲ್ಲೂ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ವಿವರಗಳಿಗೆ ದಯವಿಟ್ಟು ನೋಡಿ/ಸಂಪರ್ಕಿಸಿ:-

೧. ಇಲಾಖಾ ವೆಬ್‌ಸೈಟ್: www.parisara.kar.nic.in ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವೆಬ್‌ಸೈಟ್: www.kspcb.kar.nic.in

೨. ಜಿಲ್ಲೆಯ ಜಿಲ್ಲಾಧಿಕಾರಿಗಳ ಕಚೇರಿ/ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ/ ಇಲಾಖಾ ಪ್ರಾದೇಶಿಕ ನಿರ್ದೇಶಕರು (ಪರಿಸರ) ರವರ ಕಛೇರಿ.

ಸಹಿ/–
ಸರ್ಕಾರದ ವಿಶೇಷ ಕಾರ್ಯದರ್ಶಿಗಳು,
(ಜೀವಿಶಾಸ್ತ್ರ ಮತ್ತು ಪರಿಸರ)
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ.